ಚಾಮರಾಜಕ್ಷೇತ್ರಕ್ಕೆ ಬಿಡುಗಡೆ ಮಾಡಿರುವ ಅನುದಾನ

2769 - ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಶಾಸಕರ ಅನುದಾನವನ್ನು ಚಾಮರಾಜ ಕ್ಷೇತ್ರಕ್ಕೆ ಎಷ್ಟು ಬಿಡುಗಡೆ ಮಾಡಲಾಗಿದೆ?

ಆ) ಈ ಹಣದಲ್ಲಿ ಯಾವ ಯಾವ ರಸ್ತೆಗಳಿಗೆ ಡಾಂಬರೀಕರಣ : ಕಾಮಗಾರಿ ಕೈಕೊಳ್ಳಲಾಗಿದೆ?

ಇ) ಪ್ರತಿ ವರ್ಷ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ನಿಗಧಿ ಮಾಡಿರುವ ಶಾಸಕರ ಅನುದಾನವನ್ನು ನಗರ ಪ್ರದೇಶದ ಶಾಸಕರು ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಶ್ರೀ ಎಂ. ಉದಾಸಿ (ಲೋಕೋಪಯೋಗಿ ಇಲಾಖೆ) :

ಅ) ಚಾಮರಾಜ ವಿಧಾನ ಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ, ಶಾಸಕರ ಕಾರ್ಯಕ್ರಮಕ್ಕೆ ಅನುದಾನ ಬಿಡುಗಡೆ ಈ ರೀತಿ ಇದೆ

(ಲಕ್ಷ ರೂ.ಗಳಲ್ಲಿ)

95-96	96-97	97-98	ಒಟ್ಟು
10.00	8.50	4.60	**23.10 ಲಕ್ಷ ರೂ.**

ಆ) ಡಾಂಬರೀಕರಣ ಕಾಮಗಾರಿಯು ಈ ಕೆಳಕಂಡಂತಿದೆ.

1.	ಮೈಸೂರು-ಬಂಟ್ವಾಳ ರಸ್ತೆಯ ಸರಪಳಿ 3.0 ರಿಂದ 8.40 ಕಿ.ಮೀ. ವರೆಗೆ ಕುಕ್ಕರಹಳ್ಳಿ ಕರೆಯ ರಸ್ತೆಯ ಏರಿಯನ್ನು ಅಗಲಗೊಳಿಸಿ ಜಲ್ಲಿಗಟ್ಟಣೆ ಮತ್ತು ಡಾಂಬರೀಕರಣ ಮಾಡಿ ರಸ್ತೆಯನ್ನು ಅಭಿವೃದ್ಧಿ ಪಡಿಸುವುದು.	- 15.00 ಲಕ್ಷ ರೂ.
2.	ಮೈಸೂರು - ಕೆ.ಆರ್. ರಸ್ತೆಯ ಆಯ್ದ ಭಾಗಗಳ ಡಾಂಬರೀಕರಣ	- 10.00 ಲಕ್ಷ ರೂ.
3.	ಪ್ರಿನ್ಸಸ್ ರಸ್ತೆಯ (ಕೆ.ಆರ್.ಎಸ್) ರಸ್ತೆಯ ಭಾಗಗಳಲ್ಲಿ ಡಾಂಬರೀಕರಣ ಅಂದಾಜು	- 5.00 ಲಕ್ಷ ರೂ.
	ಒಟ್ಟು	**30.00 ಲಕ್ಷ ರೂ.**

ಇ) ನಗರ ಪ್ರದೇಶದ ರಸ್ತೆಗಳು ನಗರ : ಪುರಸಭೆ ವ್ಯಾಪ್ತಿಯಲ್ಲಿ ಬರುತ್ತಿದ್ದು, ಇವುಗಳ ಡಾಂಬರೀಕರಣ : ಕಾಮಗಾರಿ ಆಯಾಯ ನಗರ : ಪುರಸಭೆಯವರೇ ಕೈಗೊಳ್ಳುತ್ತಿದ್ದು, ಸರ್ಕಾರವು ಪ್ರತ್ಯೇಕವಾಗಿ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮೈಸೂರು ನಗರದಲ್ಲಿರುವ ಸರ್ಕಾರಿ ಕಟ್ಟಡಗಳು

1770 - ಶ್ರೀ ಹೆಚ್.ಎಸ್ ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ನಗರದಲ್ಲಿರುವ ಸರ್ಕಾರಿ ಕಟ್ಟಡಗಳು ಯಾವುವು? (ಶಾಲಾ ಕಾಲೇಜುಗಳು ಸೇರಿದಂತೆ)*

ಆ) *ಈ ಕಟ್ಟಡಗಳಿಗೆ ಸುಣ್ಣ-ಬಣ್ಣ, ಸಣ್ಣ ಪುಟ್ಟ ರಿಪೇರಿಗಾಗಿ ಸರ್ಕಾರ ಕಳೆದ ವರ್ಷ ಎಷ್ಟು ಹಣ ಖರ್ಚು ಮಾಡಲಾಯಿತು? (ಕಟ್ಟಡವಾರು ತಿಳಿಸಿ)*

ಇ) *ಈ ವರ್ಷ ಈ ಉದ್ದೇಶಕ್ಕಾಗಿ ಎಷ್ಟು ಹಣ ನಿಗದಿಪಡಿಸಲಾಗಿದೆ?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮೈಸೂರು ಕಟ್ಟಡಗಳ ವಿಭಾಗದ ವ್ಯಾಪ್ತಿಯಲ್ಲಿ ಒಟ್ಟು 167 ಸರ್ಕಾರಿ ಕಟ್ಟಡಗಳಿದ್ದು, ಇವುಗಳಲ್ಲಿ ವಸತಿ ಗೃಹಗಳು ಸೇರಿವೆ. ಪ್ರತ್ಯೇಕವಾದ ಪಟ್ಟಿ ಲಗತ್ತಿಸಲಾಗಿದೆ.

ಆ) ಈ ಕಟ್ಟಡಗಳಿಗೆ 1997-98ನೇ ಸಾಲಿನಲ್ಲಿ ಈ ಕೆಳಗಿನ ಲೆಕ್ಕ ಶೀರ್ಷಿಕೆಗಳಲ್ಲಿ ವೆಚ್ಚ ಮಾಡಲಾಗಿದೆ.

1.	2059 ಲೋಕೋಪಯೋಗಿ	ರೂ. 93.15 ಲಕ್ಷ
2.	2202 ಸಾಮಾನ್ಯ ಶಿಕ್ಷಣ	ರೂ. 0.29 ಲಕ್ಷ
3.	2203 ತಾಂತ್ರಿಕ ಶಿಕ್ಷಣ	ರೂ. 0.31 ಲಕ್ಷ
4.	2210 ವೈದ್ಯಕೀಯ	ರೂ. 56.60 ಲಕ್ಷ
5.	2216 ಗೃಹಗಳಿಗಾಗಿ	ರೂ. 10.33 ಲಕ್ಷ
	ಒಟ್ಟು	**ರೂ.160.68 ಲಕ್ಷ**

ಇ) 1998-99ನೇ ಸಾಲಿಗೆ ದುರಸ್ತಿಗಾಗಿ ಅನುದಾನವನ್ನು ಹಂಚಿರುವುದಿಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ ವಿಧಾನಸಭಾ ಸದಸ್ಯರುರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2734ರ ಪ್ರಶ್ನೆ ಸಂಖ್ಯೆ :1 ಕ್ಕೆ ವಿವರಗಳು.